ಇದೆ. ಇದು ತಪ್ಪುಒಪ್ಪುಗಳ ನೈತಿಕ ಎಲ್ಲೆ ಮೀರಿ ತನ್ನದೇ ಆದ ಸಮರ್ಥನೆಯನ್ನು ರೂಪಿಸಿಕೊಳ್ಳುವುದಕ್ಕೆ ಅನುವು ಮಾಡಿಕೊಡುತ್ತಿರುತ್ತದೆ. ಇದನ್ನು ಕಥೆಗಾರರು ಕೆಲವು ರೂಪಕಗಳಲ್ಲಿ ಹಿಡಿಯುತ್ತಾರೆ. ಬಹುರಾಷ್ಟ್ರೀಯ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಯುವಕನಿಗೆ ಇಲಿಗಳನ್ನು ಆರೈಕೆ ಮಾಡುವ, ಅವು ಸಾಯದಂತೆ ನೋಡಿ ಫಲಿತಾಂಶ ಕಂಡುಕೊಳ್ಳುವ ಕೆಲಸ. ಇಲಿಗಳ ಅಳಿವು ಉಳಿವು ಪರೋಕ್ಷವಾಗಿ ಅವನ ಅಳಿವು ಉಳಿವಿನ ಪ್ರಶ್ನೆಯೂ ಆಗಿರುತ್ತದೆ. ಎಲ್ಲ ಕಡೆ ಕಂಪನಿಗಳು 'ಲೇ ಆಫ್' ಮಾಡುತ್ತಿರುವ ಸುದ್ದಿ ಬರುತ್ತಿದ್ದರೆ, ಇನ್ನೊಬ್ಬ ಸಾಕುತ್ತಿದ್ದ ಇಲಿಗಳನ್ನು ಕೊಂದಾದರೂ ತಾನು ಇಲ್ಲಿ ಉಳಿಯಬೇಕಾದ ಅಗತ್ಯವನ್ನು ಇಲ್ಲಿ ಕಥಾನಾಯಕ ಭಾವಿಸುತ್ತಾನೆ. ಈ ಉಳಿವಿನ ಸ್ವಾರ್ಥದ ಜೊತೆಗೆ ನಗರದ ಸಂವೇದನೆಯಲ್ಲಿ ಸುಖವಾಗಿ ಬದುಕುವ ಕಲ್ಪನೆ ಇರುವುದನ್ನು ರಮೇಶಬಾಬು ಹಿಡಿಯುತ್ತಾರೆ. ಆ ಭಾವ ಸಹ ರೂಪಕಾತ್ಮಕವಾಗಿ ಇಲ್ಲಿನ ಕಥೆಗಳಲ್ಲಿ ಬರುತ್ತದೆ. 'ಸಾವಯವ' ಎನ್ನುವ ಕಥೆಯಲ್ಲಿ ಆಸ್ತಿ ಮಾರಿ ಬಂದ ಹಣದಲ್ಲಿ ಸುಮ್ಮನೇ ಕೂತುಣ್ಣುವ ಪರಮೇಶಿಗೆ ತಿನ್ನುವ ಅನ್ನವೇ ಹುಳವಾಗಿ ಕಾಣುವ ಒಂದು ಮಾನಸಿಕ ಕಾಯಿಲೆ ಉಂಟಾಗುತ್ತದೆ. 'ಕಾಣೆಯಾದವರು' ಕಥೆಯಲ್ಲಿ ನರಸಿಂಹ, ಕೊರೊನಾದಿಂದ ಹಾಸಿಗೆ ಹಿಡಿದಾಗ ಆ ಕಾಯಿಲೆಯ ಸ್ವರೂಪ, ಅದರ ಬೀಸುಗಳನ್ನು ಕಣ್ಣಾರೆ ಕಾಣಬೇಕಾಗುತ್ತದೆ. ಇಲ್ಲಿಯೂ ಮೈಬಗ್ಗಿಸಿ ಕೆಲಸ ಮಾಡದೇ ಹಣ ಮಾಡುವುದು ಹೇಗೆ ಎನ್ನುವವನಿಗೆ ಕೊರೊನಾ ಒಡ್ಡುವ ಸವಾಲು ನಗರದ 'ಸುಖ'ದ ಕಲ್ಪನೆಯನ್ನೇ ಕೆಣಕುವಂತಿದೆ. ಇನ್ನು ಹಳ್ಳಿಲೋಕವಾದರೋ ರಮ್ಯ ಸುಂದರ ತಾಣವಾಗಿದೆಯೇ? ಎಂದರೆ ರಮೇಶರು ಅದನ್ನೂ ರಮ್ಯವಾಗಿಸುವುದಿಲ್ಲ. ಪಾರಂಪರಿಕವಾಗಿ ಬಂದ ಶೋಷಣಾ ವ್ಯವಸ್ಥೆಗಳು ಅಲ್ಲಿನ ಬದುಕುಗಳನ್ನು ಅಸಹನೀಯವಾಗಿಸಿವೆ, ಇಲ್ಲಿಯೂ ಹಣ ಗಳಿಕೆಯೇ ಪ್ರಧಾನ. ಅದಕ್ಕೆ ಹೊಂದಿಕೊಂಡಂತೆ ವ್ಯವಸ್ಥೆಗಳು ರೂಪುಗೊಂಡಿರುತ್ತವೆ. 'ಹುಯ್ಯೋ ಹುಯ್ಯೋ ಮಳೆರಾಯ', 'ಕೇರಿಗಳು' ಕಥೆಗಳು ಬಿಚ್ಚಿಡುವ ಹಳ್ಳಿಯ ಜೀವನಗಳು ಇದನ್ನು ಸಮರ್ಥಿಸುವಂತಿವೆ.

'ಮಹಾತ್ಮೆ' ಸಂಕಲನದ ಕಥೆಗಳು ಆಧುನಿಕತೆಯತ್ತ ಹೊರಳಲೇಬೇಕಾದ ಸಾಮಾಜಿಕ ಸಂದರ್ಭಗಳನ್ನು ಹೊಂದಿದ್ದು, ಆಧುನಿಕತೆ ಎನ್ನುವುದು ನಾವು ಭ್ರಮಿಸಿದಂತೆ ಬರಿಯ ಪ್ರಗತಿಶೀಲತೆಯನ್ನು ಸೂಚಿಸುವ ಪ್ರಕ್ರಿಯೆಯಾಗಿದೆಯೇ? ಎಂಬ ಪ್ರಶ್ನೆ ಎತ್ತುತ್ತವೆ. ಆಧುನಿಕತೆ ಎನ್ನುವುದು ಒಂದು ಸಂಕೀರ್ಣವಾದ ಪ್ರಕ್ರಿಯೆ. ಅದು ವಸ್ತುಶಃವಾಗಿಯೂ ಇರಬಹುದು ಅಥವಾ ಮನೋಧೋರಣೆಯಾಗಿಯೂ ಇರಬಹುದು. ಇವೆರಡರ ಸಂಕೀರ್ಣ ಮಿಶ್ರಣದಲ್ಲಿ ಆಧುನಿಕತೆಯನ್ನು ನೋಡಬೇಕು. ಈ ದೃಷ್ಟಿಯಿಂದ ಈ ಸಂಕಲನದ 'ಮಹಾತ್ಮೆ' ಕಥೆ ಗಮನಿಸಬೇಕು ಶನಿಕಥೆ ಹೇಳುವುದು, ಹೇಳಿಸುವುದು ಎಲ್ಲವೂ ಒಂದು ಗ್ರಾಮೀಣ ಪರಂಪರೆಯ ಭಾಗಗಳು. ಹೊಸಗಾಲದಲ್ಲಿ ಸಾಮಾಜಿಕ ಸಂದರ್ಭಗಳು ಬದಲಾಗುತ್ತಾ ಹೋದಂತೆ ಶನಿಮಹಾತ್ಮೆಯ ಕಥೆಯ ಓದು, ಆಚರಣೆಯ ಶ್ರದ್ಧೆ ಕಳೆದುಹೋಗುತ್ತಿದೆ. ಈ ಕಥೆಯ ಕೇಂದ್ರ ಪಾತ್ರವಾದ ಗಂಗಿರೆಡ್ಡಿ ಶನಿಮಹಾತ್ಮೆ ಕಥೆ ಕಲಿತು ಬೇರೆ ಬದುಕು ಮಾಡದವನು. ಸರಿಯಾದ ಕಾಲದಲ್ಲಿ ಮದುವೆಯೂ ಆಗದ ಇವನಿಗೇ ಶನಿ ಮೆಟ್ಟಿಕೊಂಡಿದೆ ಎಂದು ಜನ ಹಾಸ್ಯ ಮಾಡುತ್ತಿರುತ್ತಾರೆ.

ಗಂಗಿರೆಡ್ಡಿಯ ಶ್ರದ್ಧೆ, ಕಥೆಯ ತಾದಾತ್ಮ್ಯ ಎಲ್ಲವೂ ಕಾಲದ ಹರಿವಿನಲ್ಲಿ ಕೊಚ್ಚಿ ಹೋಗುತ್ತಿದೆ ಎನ್ನಿಸುವಾಗ ಗಂಗಿರೆಡ್ಡಿ ತನ್ನೆಲ್ಲಾ ಅನುಭವಗಳನ್ನೂ, ಊರಿನ ಅನುಭವಗಳನ್ನು ಶನಿಕಥೆಯ ಮೂಲಕವೇ ವ್ಯಾಖ್ಯಾನಿಸಲು ಯತ್ನಿಸುತ್ತಿರುತ್ತಾನೆ. ಇದು ವ್ಯಂಗ್ಯ. ಕಥೆಯ ಮುಗಿತಾಯ ಮಾತ್ರ ಇನ್ನೂ ವ್ಯಂಗ್ಯವಾಗಿದೆ. ಐವತ್ತಾದರೂ ಮದುವೆಯಾಗದ ಗಂಗಿರೆಡ್ಡಿಯನ್ನು ಅವನಣ್ಣ ಸಿಟಿಯಲ್ಲಿ ಶಾಸ್ತ್ರ ಹೇಳುವ ಜ್ಯೋತಿಷ್ಯಾಲಯಕ್ಕೆ ಕರೆದೊಯ್ಯುತ್ತಾನೆ. ಇವನು ಶನಿ ಕಥೆ ಹೇಳುತ್ತಾನೆ ಎಂದು ತಿಳಿದ ಆ ಜ್ಯೋತಿಷಿ, 'ಇತ್ತೀಚೆಗೆ ನಗರದ ಜನಗಳಿಗೆ ಶನಿಕಾಟ ಬಹಳವಾಗಿ ಪರಿಹಾರ ಕೇಳಿಕೊಂಡು ನನ್ನ ಹತ್ರ ಬರುತ್ತಾ ಇರುತ್ತಾರೆ. ಅವರಿಗೆ ಪರಿಹಾರಾರ್ಥ ಶನಿಕಥೆ ಮಾಡಿಸಿ ಎಂದು ಹೇಳುತ್ತೇನೆ. ನೀನು ಮಾಡಿಸಿಕೊಂಡು ಹೋಗು, ನಿನ್ನ ಸಂಪಾದನೆಯಲ್ಲಿ ನನಗರ್ಧ ನಿನಗರ್ಧ' ಎಂದು ವ್ಯವಹಾರ ಮಾತನಾಡುತ್ತಾನೆ.